ಸರ್ಕಾರಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಇದನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಆ) ವಿದೇಶಿ ಮಾರುಕಟ್ಟೆಗೆ ರಫ್ತು ಮಾಡುವ ಹಿನ್ನೆಲೆಯಲ್ಲಿ ಉತ್ತಮ ಮೀನುಗಳನ್ನು ಮಾತ್ರ ಕ್ರೋಡಿಕರಿಸಲು ಮಿಕ್ಕುಳಿದ ಮೀನುಗಳನ್ನು ಸಮುದ್ರದಲ್ಲಿ ಬಿಸಾಡುವುದರಿಂದ ಮೀನುಗಳು ನಶಿಸಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಸರ್ಕಾರ ಆ ಬಗ್ಗೆ ಕೈಗೊಂಡ ಪರಿಹಾರಗಳೇನು?

ಶ್ರೀ ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಆ) ರಾಜ್ಯದ ಕರಾವಳಿಯಲ್ಲಿ ಆಳ ಸಮುದ್ರ ಮೀನುಗಾರಿಕೆಗೆ ವಿದೇಶಿ ನೌಕೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳುವ ವಿಷಯವು ಕೇಂದ್ರ ಸರ್ಕಾರಕ್ಕೆ ಸಂಬಂಧಪಟ್ಟಿರುತ್ತದೆ. ಇದರಿಂದ, ಕರಾವಳಿಯ ಸಾಮಾನ್ಯ ಮೀನುಗಾರರು ನೀಡಿರುವ ದೂರುಗಳ ಬಗ್ಗೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಗಮನಕ್ಕೆ ತರಲಾಗಿದೆ. ಇದರ ನಿಯಂತ್ರಣ ನಿವಾರಣೆ ಕೇಂದ್ರ ಸರ್ಕಾರದ ವ್ಯಾಪ್ತಿಯ ವಿಷಯವಾಗಿರುತ್ತದೆ. ಆದ್ದರಿಂದ ಈ ಬಗ್ಗೆ ರಾಜ್ಯ ಸರ್ಕಾರದಿಂದ ಯಾವುದೇ ಒಪ್ಪಂದಗಳನ್ನು ಮಾಡಿಕೊಂಡಿರುವುದಿಲ್ಲ.

ಆ) ಆಳ ಸಮುದ್ರ ಮೀನುಗಾರಿಕೆಯಲ್ಲಿ ಷರತ್ತುಗಳ ಪ್ರಕಾರ ಮೀನುಗಾರಿಕೆ ಮಾಡುತ್ತಿದ್ದು, ಕರಾವಳಿ ರಕ್ಷಣಾಪಡೆ ಹಾಗೊಂದು ವೇಳೆ ಕಾನೂನು ಉಲ್ಲಂಘನೆ ಮಾಡಿ ಮೀನುಗಾರಿಕೆ ಮಾಡಿದರೆ ಕ್ರಮವಿಡಲಾಗುತ್ತಿದೆ. ರಫ್ತು ಮಾಡುವಂತಹ ಮೀನುಗಳನ್ನು ಮಾತ್ರ ಹಿಡಿಯುತ್ತಿದ್ದು, ಇತರ ಮೀನುಗಳನ್ನು ಉಪಯೋಗಿಸುವುದಿಲ್ಲವೆಂಬ ದೂರುಗಳ ಬಗ್ಗೆ ತೀವ್ರ, ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗಿದ್ದು, ಇದನ್ನು ನಿಯಂತ್ರಿಸಲು ಕೇಂದ್ರ ಸರ್ಕಾರವು ಅದರ ಕರಾವಳಿ ಪಡೆಗೆ ಸೂಕ್ತ ನಿರ್ದೇಶನ ನೀಡಲಾಗಿದೆ. ಸದರಿ ಪಡೆಯವರ ಪ್ರಕಾರ ಸಣ್ಣ ಮೀನುಗಳನ್ನು ಹಿಡಿಯುತ್ತಿಲ್ಲವೆಂದು ತಿಳಿದು ಬಂದಿದೆ.

ಪುತ್ತೂರು ತಾಲ್ಲೂಕು ಕ್ಯೊಲ ಜಾನುವಾರು ಕೇಂದ್ರ

2312 - ಶ್ರೀ ಡಿ. ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರು ತಾಲ್ಲೂಕು ಕ್ಯೊಲ ಜಾನುವಾರು ಕೇಂದ್ರಕ್ಕೆ ಸುಮಾರು 1400 ಎಕರೆ ಜಾಗದಲ್ಲಿ ಯಾವುದೇ ವ್ಯವಸ್ಥಿತ ಕೆಲಸಗಳು ನಡೆಯದೆ ಈ ಜಾಗವು ನಿರುಪಯೋಗವಾಗಿರುವುದರಿಂದ ಈ ಜಾಗದಲ್ಲಿ ಸರ್ಕಾರದವರು ಯಾವುದಾದರು ಕೆಲಸಗಳನ್ನು ಹಮ್ಮಿಕೊಂಡಿದ್ದಾರೆಯೇ?

ಆ) ಆ ಪ್ರದೇಶದಲ್ಲಿ ಯಾವುದೇ ಕೃಷಿ ವಿಶ್ವವಿದ್ಯಾಲಯಗಳಲ್ಲಿದೆ ಇದ್ದು ಈ ಜಾಗವು ಅದಕ್ಕೆ ಸೂಕ್ತ ಸ್ಥಳವಾಗಿರುವ ಹಿನ್ನೆಲೆಯಲ್ಲಿ ಇಲ್ಲಿ ಕೃಷಿ ವಿದ್ಯಾಲಯವನ್ನು ಆರಂಭಿಸುವ ಇರಾದೆ ಸರ್ಕಾರಕ್ಕೆ ಇದೆಯೇ?

7444 - 114

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಸದರಿ ಕ್ಷೇತ್ರವು ಒಟ್ಟು 760.63 ಎಕರೆಗಳಿದ್ದು 70 ಎಕರೆ ಪ್ರದೇಶದಲ್ಲಿ ನೀರಾವರಿ ಮತ್ತು ಮಳೆಯ ಆಶ್ರಯದ ಮೇವು ಬೆಳೆಗಳನ್ನು ಉತ್ಪಾದನೆ ಮಾಡಲಾಗುತ್ತದೆ. ಉಳಿದ ಪ್ರದೇಶದಲ್ಲಿ ಕಛೇರಿ ಕಟ್ಟಡ, ದನಗಳ ಕೊಟ್ಟಿಗೆ, ಹಂದಿ ಸಾಕಾಣಿಕೆ ಗೂಡುಗಳು ಮತ್ತು ಹುಲ್ಲುಗಾವಲು ಪ್ರದೇಶವಿರುತ್ತದೆ. ಸಂಪೂರ್ಣವಾಗಿ ಕ್ಷೇತ್ರದ ಜಾನುವಾರುಗಳ ಉಪಯೋಗಕ್ಕಾಗಿ ಬಳಸಲಾಗುತ್ತಿರುವುದರಿಂದ ಸದರಿ ಕ್ಷೇತ್ರದ ಜಮೀನು ನಿರುಪಯುಕ್ತವಾಗಿರುವುದಿಲ್ಲ. ಮೇವು ಉತ್ಪಾದನೆ ಹಾಗೂ ವರಾಹ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸಹಾ ಇಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಜರ್ಸಿ ತಳಿ ಘನೀಕೃತ ವೀರ್ಯ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ.

ಆ) ಇಲ್ಲ.

2314 - Sri. G.V. Sreerama Reddy (Bagepalli) : Will the Deputy Chief Minister be pleased to state?

a) What is the State Receipts for the year 1997-98?

b) What is the amount spent towards salary, conveyance allowance, dearness allowance, pension, other allowances for State Government servants?

c) Out of which, how much is spent towards salary and other allowances for IAS Officers?

d) What is the amount spent for State developmental activities?

Sri Siddaramaiah (Deputy Chief Minister) :

a) According to revised estimates for the year 1997-98, the State receipts was Rs. 11,417.31 crores.

b) Rs. 4353.25 crores approxiamately.

c) This data is not readily available in Finance Department as the data have not been maintained in a manner where such information could be compiled.

d) According to revised estimates, an amount of Rs. 4326 crores has been spent under State Plan Sector during that period.